# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಉಪ ವಿಭಾಗ, ಚಿಕ್ಕಬಳ್ಳಾಪುರ

## ಚಿಕ್ಕಬಳ್ಳಾಪುರ ಜಿಲ್ಲೆಯ ನಗರ / ಪಟ್ಟಣಗಳ ಕುಡಿಯುವ ನೀರು ಸರಬರಾಜು ಯೋಜನೆಗಳ ವಿವರಗಳು

### 1) ಚಿಕ್ಕಬಳ್ಳಾಪುರ ನಗರ:

ಚಿಕ್ಕಬಳ್ಳಾಪುರ ನಗರವು ನೂತನವಾಗಿ ಕೇಂದ್ರವಾಗಿದ್ದು, ನಗರದ ಜನಸಂಖ್ಯೆ 2001 ರ ಜನಗಣತಿ ಪ್ರಕಾರ 54938 ಇದ್ದು, ಪ್ರಸ್ತುತ ಜನಸಂಖ್ಯೆ ಸುಮಾರು 65000 ಇರುತ್ತದೆ. ಈ ಹಿಂದೆ ನಗರಕ್ಕೆ ಜಕ್ಕಲಮಡಗು ಜಲಾಶಯದಿಂದ 0.90 ದಶಲಕ್ಷ ಲೀಟರ್ ಮತ್ತು ನಗರದ ವಿವಿಧ ಕಡೆ ಇರುವ ಕೊಳವೆಬಾವಿಗಳಿಂದ ಸುಮಾರು 2.50 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ನಗರ ನೂತನ ಜಿಲ್ಲೆಯಾಗಿ ಮಾರ್ಪಟ್ಟು, ಜನಸಂಖ್ಯೆಯು ತೀವ್ರಗತಿಯಲ್ಲಿ ಬೆಳೆಯುತ್ತಿರುವುದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಉತ್ತಮಪಡಿಸಲು ಜಕ್ಕಲಮಡಗು ಜಲಾಶಯವನ್ನು ಅಭಿವೃದ್ಧಿಪಡಿಸಿ, ಅದರ ಮೂಲದಿಂದ 3ನೇ ಹಂತದ ಕುಡಿಯುವ ನೀರಿನ ಯೋಜನೆಯ ರೂ. 2700.00 ಲಕ್ಷಗಳ ಅಂದಾಜುಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯು ಯುಡಿಡಿ/ 36/ ಯುಡಬ್ಲುಎಸ್/ 2007 ದಿನಾಂಕ: 22-8-2007 ರಲ್ಲಿ ದೊರೆತ್ತಿದ್ದು, ಮಂಡಳಿವತಿಯಿಂದ ತಾಂತ್ರಿಕ ಅನುಮೋದನೆಯ ಸಂಖ್ಯೆ: ಕೆಡಬ್ಲುಬಿ/ಸಿ.ಇ/ ಡಿಡಿಸಿ-1/ ಎ.ಇ-5/ 2155 ದಿನಾಂಕ: 26-10-2007 ರಲ್ಲಿ ಮಂಜೂರಾಗಿರುತ್ತದೆ.

ಸದರಿ ಯೋಜನೆಯ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಮೆ. ಸಾಯಿ ಸುಧೀರ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ರವರಿಗೆ ಕರಾರು ಪತ್ರದ ಸಂಖ್ಯೆ: 5/ 08-09 ದಿನಾಂಕ: 7-11-2008 ರಂದು ನೀಡಿದ್ದು, ದಿನಾಂಕ: 26-11-2008 ರಂದು ಸ್ಥಳವನ್ನು ಹಸ್ತಾಂತರಿಸಿದ್ದು, 25-5-2010 ರ ದಿನಾಂಕವು ಕಾಮಗಾರಿಯನ್ನು ಪೂರ್ಣಗೊಳಿಸಲು ಟೆಂಡರ್ ಕಾಲಮಿತಿ ಪ್ರಕಾರ ಕೊನೆಯ ದಿನವಾಗಿರುತ್ತದೆ. ಆದರೆ ಜಲಶುದ್ಧೀಕರಣ ಘಟಕಕ್ಕೆ ಬೇಕಾದ ಜಾಗ ಹಾಗೂ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಲು ವಿಳಂಬವಾದ ಹಿನ್ನಲೆಯನ್ನು ಪರಿಗಣಿಸಿ ಜನವರಿ ಅಂತ್ಯಕ್ಕೆ ಪೂರ್ಣಗೊಳಿಸಲು ಗುತ್ತಗೆದಾರರಿಗೆ ಸೂಚಿಸಲಾಗಿದೆ.

ಜಕ್ಕಲಮಡಗು ಜಲಾಶಯದಲ್ಲಿ 10X12 ಮೀಟರ್ ಅಳತೆಯ ಪಂಪು ಮನೆ (Jackwell) ಕಾಮಗಾರಿಯು ಬಹುತೇಕ ಪೂರ್ಣಗೊಂಡಿರುತ್ತದೆ. 180 ಅಶ್ವ ಶಕ್ತಿಯ turbine pump ಗಳನ್ನು ಜಕ್ಕಲಮಡಗದು ಜಲಾಶಯದ ಜಾಕ್ ವೆಲ್ ನಲ್ಲಿ ಹಾಗು 335 ಅಶ್ವ ಶಕ್ತಿಯ ಮುಖ್ಯ ಯಂತ್ರಗಾಮಿಗಳನ್ನು ಮಧ್ಯಂತರ ಪಂಪ್ ಹೌಸ್ ನಲ್ಲಿ (intermediate pump house) ಅಳವಡಿಸಲು ಗುತ್ತಿಗೆದಾರರನ್ನು ನಿಗದಿಪಡಿಸಿದ್ದು, ಮೇಲ್ಕಂಡ ಕಾಮಗಾರಿಗಳು ಮೇ 2011 ರೊಳಗೆ ಪೂರ್ಣಗೊಳ್ಳಲಿದೆ.

ಯೋಜನೆಯನ್ನು 2024 ಮತ್ತು 2039 ನೇ ಇಸವಿಯಲ್ಲಿ ಊಹಿಸಲಾದ ಜನಸಂಖ್ಯೆ ಕ್ರಮವಾಗಿ 89311 ಮತ್ತು 113390 ಕ್ಕೆ ದಿನಂಪ್ರತಿ ತಲಾ ನಗರದ ಜನಸಂಖ್ಯೆಗೆ 100 ಲೀಟರಿನಂತೆ ಹಾಗೂ ಮಾರ್ಗಮಧ್ಯದಲ್ಲಿ ಬರುವ 10 ಹಳ್ಳಿಗಳ ಜನಸಂಖ್ಯೆಗೆ ದಿನಂಪ್ರತಿ ತಲಾ 55 ಲೀಟರ್ ನ ಬೇಡಿಕೆಯಂತೆ ವಿನ್ಯಾಸಗೊಳಿಸಲಾಗಿದೆ.

**2) ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಿನ 128 ಹಳ್ಳಿಗಳಿಗೆ:-** ಮೂಲ ಪ್ರಸ್ತಾವನೆಯಲ್ಲಿ 88 ಗ್ರಾಮಗಳಿಗೆ ದಿನಂಪ್ರತಿ 55 ಲೀಟರಿನಂತೆ ನೀರನ್ನು ಒದಗಿಸಲು ಅನುವು ಮಾಡಿರುವ ಬದಲಾಗಿ ಫ್ಲೋರೈಡ್ ಅಂಶವಿರುವ 128 ಹಳ್ಳಿಗಳಿಗೆ (ಬಾಗೇಪಲ್ಲಿ ತಾಲ್ಲೂಕಿನ 73 ಹಳ್ಳಿಗಳಿಗೆ ಮತ್ತು ಗುಡಿಬಂಡೆ ತಾಲ್ಲೂಕಿನ 55 ಹಳ್ಳಿಗಳಿಗೆ) ದಿನಂಪ್ರತಿ 40 ಲೀಟರಿನಂತೆ 2026ರ ವರ್ಷದಲ್ಲಿ ನಿರೀಕ್ಷಿಸಬಹುದಾದ 80437 ಜನಸಂಖ್ಯೆಗೆ ನೀರು ಸರಬರಾಜು ಮಾಡಲು RDPR ಅನುದಾನದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಅಂದಾಜು ವೆಚ್ಚ ರೂ: 2291.20 ಲಕ್ಷಗಳಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಸದರಿ ಯೋಜನೆಯ ಕಾಮಗಾರಿಯನ್ನು ಮೆ॥ ಶ್ರೀ.ಶುಭಾ ಸೇಲ್ಸ್, ಬೆಂಗಳೂರುರವರಿಗೆ ಕರಾರು ಸಂಖ್ಯೆ9/08-09 ದಿನಾಂಕ:9.2.2009ರಲ್ಲಿ ವಹಿಸಲಾಗಿದೆ. ಜಲ ಶುದ್ಧೀಕರಣ ಘಟಕ ಮತ್ತು ಮೇಲ್ಮಟ್ಟದ ಜಲಸಂಗ್ರಹಾಗಾರಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಅವಶ್ಯಕವಿರುವ ಸ್ಥಳಗಳನ್ನು ಜಿಲ್ಲಾ ಆಡಳಿತ/ ಆರ್.ಡಿ.ಪಿ.ಆರ್ ರವರ ವತಿಯಿಂದ ದಿನಾಂಕ:1.12.2009ರಂದು ಹಸ್ತಾಂತರಪಡಿಸಿಕೊಳ್ಳಲಾಗಿದ್ದು, ಟೆಂಡರ್ ನಿಯಮಗಳಂತೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶವಿರುತ್ತದೆ. ಆದರೂ ತುರ್ತು ಎಂದು ಪರಿಗಣಿಸಿ ಜುಲೈ-2011ರ ಅಂತ್ಯಕ್ಕೆ ಹಂತಹಂತವಾಗಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.

ಸದರಿ ಯೋಜನೆಗೆ RDPR ಇಲಾಖೆಯು ಇದುವರೆವಿಗೆ **ರೂ: 1951.25** ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಉಳಿಕೆ ಹಣ **ರೂ: 339.95** ಲಕ್ಷಗಳನ್ನು ಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಯೋಜನೆಯ ವೆಚ್ಚವು ಫೆಬ್ರವರಿ 2011 ರ ಅ್ಯಂತ್ಯದ ವೆಚ್ಚವೂ ಸೇರಿ ರೂ: 1730.00 ಲಕ್ಷಗಳು ಆಗಿರುತ್ತದೆ.

**3) ಗೌರಿಬಿದನೂರು ಪಟ್ಟಣ:**

ಗೌರಿಬಿದನೂರು ಪಟ್ಟಣದ ಜನಸಂಖ್ಯೆ 2001 ಇಸವಿ ಜನಗಣತಿಪ್ರಕಾರ 30530 ಇದ್ದು, ಪ್ರಸ್ತುತ ಜನಸಂಖ್ಯೆ ಸುಮಾರು 35000 ಇರುತ್ತದೆ. ಪ್ರಸ್ತುತ ಪಟ್ಟಣಕ್ಕೆ ಕೊಳವೆಬಾವಿಗಳಿಂದ 1.70 ದಶಲಕ್ಷ ಲೀಟರ್ ನೀರನ್ನು ದಿನಂಪ್ರತಿ ತಲಾ 48 ಲೀಟರಿನಂತೆ ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಪಡಿಸಲು ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಿಂಡಿ ಅಣೆಕಟ್ಟು ಮೂಲದಿಂದ ನೀರು ಸರಬರಾಜು ಯೋಜನೆ ರೂ. 499.00 ಲಕ್ಷಗಳ ಅಂದಾಜಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯ ಸಂಖ್ಯೆ: ಎನ್ ಎಇ/ 18 / ಯು.ಡಬ್ಲು.ಎಸ್/ 2007 ದಿನಾಂಕ: 13-8-2008 ರಲ್ಲಿ ದೊರೆತ್ತಿದ್ದು, ಮಂಡಳಿಯ ತಾಂತ್ರಿ ಅನುಮೋದನೆಯ ಸಂಖ್ಯೆ: 1945 ದಿನಾಂಕ 19-9-2008 ರಲ್ಲಿ ಮಂಜುರಾಗಿರುತ್ತದೆ.

ಸದರಿ ಯೋಜನೆ ಕಾಮಗಾರಿಯನ್ನು ಟೆಂಡರ್ ಮೂಲಕ ಶ್ರೀ ಎಂ.ಎನ್. ರಮೇಶ್, ಗುತ್ತಗೆದಾರರು, ತುಮಕೂರು ಇವರಿಗೆ ಕರಾರು ಸಂಖ್ಯೆ 11/ 09-10 ದಿನಾಂಕ 9-4-2009 ರ ಮೂಲಕ ಗುತ್ತಿಗೆಗೆ ನೀಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಡಿಯಲ್ಲಿ ಉದೇಶಿಸಿರುವಂತೆ, ಗೊಲ್ಲಹಳ್ಳಿ ಗುಡ್ಡದ ಮೇಲೆ 10.00 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ (GLSR) ನಿರ್ಮಿಸಲು ಅಗತ್ಯವಿರುವ 50 X 50 ಮೀಟರ್ ಜಾಗವನ್ನು ಮಂಡಳಿಗೆ ಸ್ಥಳೀಯ ಸಂಸ್ಥೆಯಿಂದ ಹಸ್ತಾಂತರ ಮಾಡಲು ವಿಳಂಬವಾಗುತ್ತಿದ್ದ ಕಾರಣ, ನೇರವಾಗಿ ಜಾಕ್ ವೆಲ್ ನಿಂದ ಮೇಲ್ಮಟ್ಟ ಜಲಸಂಗ್ರಹಗಾರಗಳಿಗೆ ಹರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ.

ಅದರಂತೆ, ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜುಲೈ 2011 ರ ಅಂತ್ಯಕ್ಕೆ ಪೂರ್ಣಗೊಳಿಸಿ ಚಾಲ್ತಿಗೊಳಿಸಲು ಗುತ್ತಗೆದಾರರಿಗೆ ಸೂಚಿಸಲಾಗಿದೆ.

ಯೋಜನೆಯನ್ನು 2021 ಮತ್ತು 2036 ನೇ ಇಸವಿಯಲ್ಲಿ ಊಹಿಸಲಾದ ಜನಸಂಖ್ಯೆ ಕ್ರಮವಾಗಿ 42000 ಮತ್ತು 54000 ಕ್ಕೆ ದಿನಂಪ್ರತಿ ತಲಾ ನಗರದ ಜನಸಂಖ್ಯೆಗೆ 100 ಲೀಟರ್ ನ ಬೇಡಿಕೆಯಂತೆ ವಿನ್ಯಾಸಗೊಳಿಸಲಾಗಿದೆ.

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಚಿಕ್ಕಬಳ್ಳಾಪುರ.